ವೇತನ ಪೌರ ಕಾರ್ಮಿಕರಿಂದ ಕಾರ್ಯನಿರ್ವಹಿಸಲಾಗಿರುತ್ತದೆ. ಇದು ಅಲ್ಲದೆ ಸದರಿ ಎಲ್ಲ ಮಹಾನಗರಪಾಲಿಕೆಗಳಿಗೆ 990 ಗ್ರೂಪ್ 'ಡಿ' ವೃಂದದ ಹುದ್ದೆಗಳನ್ನು ಮೂರು ಆರ್ಥಿಕ ವರ್ಷಗಳಲ್ಲಿ ತುಂಬಲು ಆರ್ಥಿಕ ಇಲಾಖೆಯ ಸಹಮತಿ ನೀಡಿರುತ್ತದೆ. ಅದರಂತೆ ಬಳ್ಳಾರಿ ಮಹಾನಗರಪಾಲಿಕೆಗೆ ಮೊದಲನೆ ಹಂತವಾಗಿ 91 ಪೌರ ಕಾರ್ಮಿಕರ ಹುದ್ದೆಗಳನ್ನು ತುಂಬಲು ಕ್ರಮವಹಿಸಲಾಗುತ್ತಿದೆ.

ಜಾನುವಾರುಗಳಿಗೆ ಕುಡಿಯುವ ನೀರು ಮತ್ತು ಮೇವು

1240(1641); ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ)

ಅ) ಕಳೆದ ಮೂರು ವರ್ಷಗಳಿಂದ ರಾಜ್ಯದ ಜಾನುವಾರುಗಳಿಂದ ಕುಡಿಯುವ ನೀರು ಹಾಗೂ ಮೇವಿನ ಅಭಾವ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದಲ್ಲಿ, ಕುಡಿಯುವ ನೀರು ಹಾಗೂ ಮೇವಿನ ಅಭಾವ ನೀಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಈಗಾಗಲೇ ಬರದ ಛಾಯೆ ಇದ್ದು, ಜಾನುವಾರುಗಳಿಗೆ ಮೇವಿನ ಅಭಾವ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಈ) ಹಾಗಿದ್ದಲ್ಲಿ, ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ (ಮಾಹಿತಿ ನೀಡುವುದು)?

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶು ಸಂಗೋಪನೆ ಸಚಿವರು)

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ 2012ನೇ ಸಾಲಿನಲ್ಲಿ ಜಾನುವಾರುಗಳಿಗೆ ಮೇವಿನ ಕೊರತೆ ಉಂಟಾಗಿದ್ದು, ಉಳಿದ ವರ್ಷಗಳಲ್ಲಿ ಜಾನುವಾರುಗಳಿಗೆ ಕುಡಿಯುವ ನೀರಿನ ಹಾಗೂ ಮೇವಿನ ಅಭಾವ ಇರುವುದಿಲ್ಲ.

ಆ) ಜಾನುವಾರುಗಳಿಗೆ ಮೇವಿನ ಅಭಾವ ನೀಗಿಸಲು ಕೆಳಕಂಡ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

2012–13ನೇ ಸಾಲಿನಲ್ಲಿ ರಾಜ್ಯವಿಪತ್ತು ಪರಿಹಾರ ನಿಧಿಯಡಿ ₹ 220.00ಲಕ್ಷಗಳಲ್ಲಿ 87020 ಮೇವಿನ ಬೀಜದ ಮಿನಿಕಿಟ್‌ಗಳನ್ನು ರೈತರಿಗೆ ಸರಬರಾಜು ಮಾಡಿ 8702 ಹೆಕ್ಟರ್ ಪ್ರದೇಶಗಳಲ್ಲಿ 435100 ಮೆಟ್ರಿಕ್ ಟನ್ ಹಸಿರು ಮೇವು ಉತ್ಪಾದಿಸಲಾಗಿದೆ. ರಾಷ್ಟ್ರೀಯ ವಿಕಾಸ ಯೋಜನೆಯಡಿಯಲ್ಲಿ ₹ 910.00ಲಕ್ಷಗಳಲ್ಲಿ 392402 ಮಿನಿಕಿಟ್‌ಗಳನ್ನು ರಾಜ್ಯದ 30 ಜಿಲ್ಲೆಗಳಿಗೆ ಸರಬರಾಜು ಮಾಡಲಾಗಿದೆ. 39240.20 ಹೆಕ್ಟರ್ ಪ್ರದೇಶಗಳಲ್ಲಿ 19.62 ಲಕ್ಷ ಮೆಟ್ರಿಕ್ ಟನ್ ಹಸಿರು ಮೇವು ಉತ್ಪಾದಿಸಲಾಗಿದೆ.

2013–14ನೇ ಸಾಲಿನಲ್ಲಿ ರಾಜ್ಯವಿಪತ್ತು ಪರಿಹಾರ ನಿಧಿಯಡಿ ₹ 500.00ಲಕ್ಷಗಳಲ್ಲಿ 197575 ಮೇವಿನ ಬೀಜದ ಮಿನಿಕಿಟ್‌ಗಳನ್ನು ರೈತರಿಗೆ ಸರಬರಾಜು ಮಾಡಿ 19757 ಹೆಕ್ಟರ್ ಪ್ರದೇಶಗಳಲ್ಲಿ 974225 ಮೆಟ್ರಿಕ್ ಟನ್ ಹಸಿರು ಮೇವು ಉತ್ಪಾದಿಸಲು ಕ್ರಮವಹಿಸಲಾಗಿದೆ.

ಇ) ಸರ್ಕಾರವು ರಾಜ್ಯದಲ್ಲಿ 98 ತಾಲ್ಲೂಕುಗಳನ್ನು ಬರ ಇರುವುದಾಗಿ ಘೋಷಿಸಿದೆ. ಆದರೆ, ಸಧ್ಯದ ಪರಿಸ್ಥಿತಿಯಲ್ಲಿ ಈ ತಾಲ್ಲೂಕುಗಳು ಮೇವಿನ ಅಭಾವ ಕಂಡುಬರುವುದಿಲ್ಲ.

ಈ) ಜಾನುವಾರುಗಳಲ್ಲಿ ಮೇವಿನ ಕೊರತೆ ಕಂಡುಬಂದಲ್ಲಿ ಅವಶ್ಯಕತೆಗೆ ಅನುಗುಣವಾಗಿ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.

1. ಗೋಶಾಲೆಗಳನ್ನು ತೆರೆಯುವುದು –ಜಾನುವಾರುಗಳಿಗೆ ಆಶ್ರಯ, ಮೇವು, ನೀರು ಒದಗಿಸುವುದು.
2. ಮೇವುನಿಧಿಗಳನ್ನು ಸ್ಥಾಪಿಸುವುದು ಮತ್ತು ಸರ್ಕಾರ ನಿಗದಿಪಡಿಸಿದ ದರದಲ್ಲಿ ಮೇವನ್ನು ರೈತರಿಗೆ ಒದಗಿಸುವುದು.
3. ಆಶಕ್ತ ಜಾನುವಾರುಗಳಿಗೆ ಪೌಷ್ಟಿಕ ಆಹಾರ ಮತ್ತು ಲವಣ ಮಿಶ್ರಣ ಸರಬರಾಜು ಮಾಡುವುದು.
4. ಆರೋಗ್ಯ ರಕ್ಷಣೆ ಮತ್ತು ಔಷಧೋಪಚಾರ ಮಾಡುವುದು.
5. ಬರ ಪೀಡಿತ ಪ್ರದೇಶಗಳಲ್ಲಿ ಜಾನುವಾರುಗಳಿಗೆ ಹಸಿರು ಮೇವು ಒದಗಿಸಲು ಮೇವು ಉತ್ಪಾದನೆಗಾಗಿ ರೈತರಿಗೆ ಮೇವಿನ ಬೀಜದ ಮಿನಿಕಿಟ್‌ಗಳನ್ನು ಸರಬರಾಜು ಮಾಡುವುದು.

ಎಕ್ಸ್‌ಪ್ರೆಸ್ ಹೈ ವೇ ನಿರ್ಮಾಣ

1241(1893); ಶ್ರೀ ಅರವಿಂದ ಲಿಂಬಾವಳಿ (ಮಹದೇವಪುರ)

ಅ) ಬೆಂಗಳೂರು ನಗರದ ಇತರೆಡೆಗಳಲ್ಲಿ ಇರುವಂತೆ ವೈಟ್‌ಫೀಲ್ಡ್‌ನ ಐ.ಟಿ.ಪಿ.ಎಲ್ ಗೆ ಎಕ್ಸ್‌ಪ್ರೆಸ್ ಹೈ ವೇ ನಿರ್ಮಾಣ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ:

ಆ) ಹಾಗಿದ್ದಲ್ಲಿ, ಈ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು;

ಇ) ಹಾಗಿಲ್ಲದಿದ್ದಲ್ಲಿ, ಐ.ಟಿ.ಪಿಎಲ್. ಗೆ ಹೋಗುವ ಮಾರ್ಗದಲ್ಲಿ ಸಂಚಾರ ದಟ್ಟಣೆಯನ್ನು ನಿವಾರಿಸಲು ಕೈಗೊಳ್ಳಲಾದ ಕ್ರಮಗಳೇನು (ವಿವರ ನೀಡುವುದು)?